ಮುದಗಲ್ಲು ಟೌನಿನಲ್ಲಿ ಬಸ್ಸು ನಿಲ್ದಾಣದ ನಿರ್ಮಾಣ

೩೯೫ (೧೩೦) ಶ್ರೀ ಜನಮಮಗಿಡ ಪಾಟೀಲ್ (ಕುಷ್ಟಗಿ).—ಸಾರಿಗೆ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:—

ಅ) ಲಿಂಗಸುಗೂರ ತಾಲ್ಲೂಕಿನ ಮುದಗಲ್ಲು ನಗರದಲ್ಲಿ ಪ್ರಯಾಣಿಕರ ದಟ್ಟಣೆ ವಿಪರೀತ ವಾಗಿದ್ದು ಅಲ್ಲಿ ಬಸ್ಸು ನಿಲ್ದಾಣವಿರುವುದರಿಂದ ಜನತೆಗೆ ತೊಂದರೆಯಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ.

ಆ) ಹಾಗಿದ್ದಲ್ಲಿ, ಈ ನಗರದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಸರಕಾರದವರು ಕ್ರಮ ಕೈಕೊಳ್ಳುವರೇ?

(ಮಾನ್ಯ ಸದಸ್ಯರು ಹಾಜರಿಲ್ಲ).

ಬಸ್ಸು ಮಾರ್ಗಗಳ ರಾಷ್ಟ್ರೀಕರಣ

೩೯೬ (೧೩೫) ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು).—ಸಾರಿಗೆ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:—

ಅ) ಕರ್ನಾಟಕದ ಯಾವ ಯಾವ ಜಿಲ್ಲೆಗಳಲ್ಲಿ ಬಸ್ಸುಗಳ ಸಾರಿಗೆ ರಾಷ್ಟ್ರೀಕರಣ ಮಾಡ ಲಾಗಿದೆ.

ಆ) ಚಿತ್ರದುರ್ಗ ಜಿಲ್ಲೆಯ ಬಸ್ಸುಗಳ ಸಾರಿಗೆಯನ್ನು ರಾಷ್ಟ್ರೀಕರಣ ಮಾಡದಿರಲು ಕಾರಣ ಗಳೇನು?

ಇ) ಕರ್ನಾಟಕದ ಯಾವ ಯಾವ ತಾಲ್ಲೂಕು ಕೇಂದ್ರಗಳಲ್ಲಿ ಸರ್ಕಾರಿ ಬಸ್ ಡಿಪೋ ಇವೆ, ಯಾವ ಯಾವ ತಾಲ್ಲೂಕುಗಳಲ್ಲಿ ಈ ಡಿಪೋಗಳನ್ನು ತೆರೆಯಲು ಉದ್ದೇಶಿಸಲಾಗಿದೆ?

ಈ) ಕರ್ನಾಟಕದ ಖಾಸಗಿ ಬಸ್ಸುಗಳ ಮಾಲೀಕರುಗಳು ಕೋಟ್ಯಾಂತರ ರೂಪಾಯಿಗಳು ಲಾಭ ಪಡೆಯುತ್ತಿದ್ದಾಗ್ಯೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ನಷ್ಟದಲ್ಲಿ ನಡೆಯುತ್ತಿರುವುದಕ್ಕೆ ಕಾರಣಗಳೇನು?

(ಮಾನ್ಯ ಸದಸ್ಯರು ಹಾಜರಿಲ್ಲ).

ಶಿವಮೊಗ್ಗದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ಸು ನಿಲ್ದಾಣದ ನಿರ್ಮಾಣದ ಬಗ್ಗೆ

೩೯೭ (೧೪೭) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ:—

ಅ) ಶಿವಮೊಗ್ಗ ನಗರದಿಂದ ಹೊರಗಡೆ ಹೋಗುವ ಮತ್ತು ನಗರಕ್ಕೆ ಬರುವ ಬಸ್ಸುಗಳ ಸಂಖ್ಯೆ ಎಷ್ಟು?

ಆ) ಶಿವಮೊಗ್ಗ ನಗರ ಸಭೆಯು ಬಸ್ ನಿಲ್ದಾಣಕ್ಕೆ ಜಾಗವನ್ನು ನೀಡಲು ಮುಂದ ಬಂದಿ ದ್ದರೂ ಸರ್ಕಾರದವರೂ ನಿರ್ಧಾರ ತೆಗೆದುಕೊಳ್ಳದಿರಲು ಕಾರಣಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ರಾಜ್ಯ ಸಾರಿಗೆ ಸಚಿವರು).—

ಅ) ೧೭೭ ಬಸ್ಸುಗಳು. ೨೫೫ ಟ್ರಿಪ್‌ಗಳು ಶಿವಮೊಗ್ಗ ನಗರದಿಂದ ಹೊರಡುತ್ತವೆ. ೨೫೫ ಟ್ರಿಪ್‌ಗಳು ಶಿವಮೊಗ್ಗ ನಗರಕ್ಕೆ ಬರುತ್ತವೆ.

ಆ) ಹಾಲಿ ಇರತಕ್ಕ ಬಸ್ ನಿಲ್ದಾಣವು ಶಿವಮೊಗ್ಗ ಪುರ ಸಭೆಗೆ ಸೇರಿರುತ್ತದೆ. ಇದು ಪ್ರಯಾಣಿಕರಿಗೆ ಹೆಚ್ಚಿನ ಸೌಲಭ್ಯವನ್ನು ಒದಗಿಸಲು ಸಾಕಾಗುವುದಿಲ್ಲ. ಆದೂ ಅಲ್ಲದೆ ಬಸ್ ಸ್ಟ್ಯಾಂಡನ್ನು ನಗರ ಸಭೆಯು ಬಿಟ್ಟುಕೊಡಬೇಕಾದರೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಅದೇ ಜಾಗದಲ್ಲಿ ಖಾಸಗೀ ಬಸ್ಸಿನವರಿಗೂ ಜಾಗವನ್ನು ಕೊಡ

ಬೇಕೆಂದು ಪುರಸಭೆಯವರು ಷರತ್ತು ಹೂಡಿ ನಿರ್ಣಯ ತೆಗೆದುಕೊಂಡಿರುತ್ತಾರೆ. ಆದಕಾರಣ ಬಸ್ ನಿಲ್ದಾಣಕ್ಕೆ ಬೇಕಾದ ಜಾಗವನ್ನು ಸ್ವಾಧೀನಪಡಿಸಿಕೊಳ್ಳಲು ಸಂಸ್ಥೆಯು ಈಗಾಗಲೇ ಶಿವಮೊಗ್ಗ ಜಿಲ್ಲಾಧಿಕಾರಿಯವರೊಡನೆ ವ್ಯವಹರಿಸಿ, ಕನಿಷ್ಟ ಪಕ್ಷ ೩ ರಿಂದ ೪ ಎಕರೆ ಜಮೀನನ್ನು ಕೇಳಲಾಗಿದೆ. ಜಾಗವು ಈ ಸಂಸ್ಥೆಯ ವಶಕ್ಕೆ ಬಂದ ಕೂಡಲೇ ನೂತನ ಮಾದರಿಯ ಬಸ್ ನಿಲ್ದಾಣವನ್ನು ಕಟ್ಟಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ಆನಂದರಾವ್.—ಮಂತ್ರಿಗಳು ತಮ್ಮ ಉತ್ತರದಲ್ಲಿ ಷರತ್ತುಗಳ ಬಗ್ಗೆ ಹೇಳಿದ್ದಾರೆ. ಹಾಲಿ ಇರತಕ್ಕ ಬಸ್ ಸ್ಟ್ಯಾಂಡ್ ಪಕ್ಕದಲ್ಲಿ ಸಾರಿಗೆ ಸಂಸ್ಥೆಯವರ ಡಿಪೋ ಇದೆ. ಮೂರು ನಾಲ್ಕು ಎಕರೆ ಜಾಗ ಅಲ್ಲೇ ಸಿಗುತ್ತದೆ. ಆ ಜಾಗ ಶಿವಮೊಗ್ಗ ನಗರದ ಮಧ್ಯದಲ್ಲಿದೆ. ಮೂರ್ನಾಲ್ಕು ಎಕರೆ ಜಾಗ ಬೇರೆಲ್ಲೂ ಇಲ್ಲ. ಶಿವಮೊಗ್ಗ ನಗರಸಭೆಯವರು ಬೇಷರತ್ತಾಗಿ ಜಾಗವನ್ನು ಸಾರಿಗೆ ಸಂಸ್ಥೆಯವರಿಗೆ ಕೊಡುವುದಾದರೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಂ.ಪಿ. ಪ್ರಕಾಶ್.—ಖಾಸಗೀ ಬಸ್ ನಿಲ್ದಾಣಕ್ಕೂ ಜಾಗವನ್ನು ಬಿಟ್ಟುಕೊಡಬೇಕೆನ್ನುವ ಪುರಸಭೆಯವರ ಷರತ್ತು ಇದೆ. ಇದನ್ನೆಲ್ಲಾ ಪರಿಶೀಲನೆ ಮಾಡಿ, ಖಂಡಿತವಾಗಿಯೂ ಅಲ್ಲಿ ಬಸ್ ನಿಲ್ದಾಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶರವೇಗದ ಬಸ್ಸುಗಳನ್ನು ನಿಗದಿತ ಸ್ಥಳಗಳಲ್ಲಿ ನಿಲ್ಲಿಸುವುದು

೫೮೮ (೧೩೮) ಶ್ರೀ ಜಾಫ್ನನದೇವ ದೊಡ್ಡಮೇಟಿ. (ರೋಣ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಶರವೇಗದ ಬಸ್ಸುಗಳು ಆಯಾ ಊರುಗಳಲ್ಲಿ ನಿಲುಗಡೆಯಾಗುವ ಸಂಬಂಧದಲ್ಲಿ ಯಾವುದಾದರೂ ಮಾರ್ಗದರ್ಶನವನ್ನು ರೂಪಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಈ ಮಾರ್ಗದರ್ಶನದ ರೂಪರೇಖೆಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ರಾಜ್ಯ ಸಾರಿಗೆ ಸಚಿವರು).—

ಅ) ಹೌದು. ರೂಪಿಸಲಾಗಿದೆ.

ಆ) ಸರ್ಕಾರದ ಅಧಿಸೂಚನೆಯ ಪ್ರಕಾರ ವೇಗಧೂತ ಮಾಜಲು ಗಾಡಿಯು ೨೫೦ ಕಿ.ಮಿ. ಅಂತರಕ್ಕಿಂತ ಹೆಚ್ಚಿನ ದೂರ ಪ್ರಯಾಣ ಮಾಡುತ್ತದೆ ಮತ್ತು ಆದಕ್ಕೆ ನಿಗದಿಪಡಿಸಲಾದ ಆದರಲ್ಲೂ ಸೀಮಿತ ನಿಲುಗಡೆ ಕೊಡಬಹುದೇ ಹೊರತು ಎಲ್ಲಾ ಬಸ್ಸು ನಿಲುಗಡೆಯಲ್ಲೂ ಮತ್ತು ಹಂತಗಳಲ್ಲೂ ಪ್ರಯಾಣಿಕರಿಗೆ ಹತ್ತುವುದಕ್ಕೆ ಮತ್ತು ಇಳಿಯುವುದಕ್ಕೆ ನಿಲ್ಲಿಸುವ ಹಾಗಿಲ್ಲ.

ಆದರೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಶರವೇಗ ವಾಹನಗಳನ್ನು ಓಡಿಸುವುದರ ಬಗ್ಗೆ ಈ ಕೆಳಗಿನ ಮಾರ್ಗದರ್ಶನಗಳನ್ನು ಅನುಸರಿಸುತ್ತಿದೆ.

೧) ಮಾರ್ಗವು ೧೦೦ ಕಿ.ಮಿ. ಅಂತರಕ್ಕಿಂತ ಹೆಚ್ಚಿನದಿರಬೇಕು.

೨) ಸೀಮಿತ ನಿಲುಗಡೆಯಿರಬೇಕು.

೩) ನಿಲುಗಡೆಗಳನ್ನು ಮುಖ್ಯವಾದ ಅಂದರೆ ನೇರ ಮತ್ತು ದೂರದ ಪ್ರಯಾಣಿಕರಿಗೆ ಮಾತ್ರ ಕೊಡಬೇಕು.

೪) ಅಂತಹ ಮಾರ್ಗಗಳು ಅಂದರೆ ಸಾಮಾನ್ಯ ಮತ್ತು ಇತರೆ ಮಾದರಿಯ ವಾಹನಗಳ ಸೌಲಭ್ಯವಿರುವಂತಹ ಮಾರ್ಗಗಳಾಗಿರಬೇಕು.

ಶ್ರೀ ಜಾಫ್ನನದೇವ ದೊಡ್ಡಮೇಟಿ.—ಶರವೇಗದ ಬಸ್ಸುಗಳನ್ನು ಓಡಿಸಲಿಕ್ಕೆ ೧೦೦ ಕಿಲೋ ಮೀಟರ್‌ಗಳಿಗಿಂತ ಹೆಚ್ಚಿನ ಅಂತರವಿರಬೇಕೆಂದು ಹೇಳುತ್ತೀರಿ, ಅದು ನಿಜ. ಶರವೇಗದ ಬಸ್ಸುಗಳ ನಿಲುಗಡೆಯ ಮಧ್ಯದಲ್ಲಿ ಬರುವ ಜನಸಂಖ್ಯೆಯ ಅಥವಾ ಪ್ರಯಾಣಿಕರ ಸಂಖ್ಯೆಯನ್ನು ಪರಿಗಣನೆಗೆ ತೆಗೆದುಕೊಳ್ಳುತ್ತೀರಾ? ಗ್ರಾಮದ ಜನರು ಬಸ್ಸುಗಳನ್ನು ತಡೆಹಿಡಿದು, ದಿನಗಟ್ಟಲೆ ಬಸ್ಸುಗಳು